(ಇಂದು ದಿನಾಂಕಃ 01-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟೀ ಸವಾಲುಃ ಪ್ರತಿವಾದಿ ನಂಬರ 5 ರ ಪರ ಶ್ರೀ. ವಿಶ್ವನಾಥ ವಕೀಲರಿಂದ ಃ</u>**

1. ಈ ದಾವೆಯನ್ನು ನಾನು ಸಲ್ಲಿಸಿರುತ್ತೇನೆ. ದಾವಾ ಆಸ್ತಿ ಯಾರ ಆಸ್ತಿ ಎಂದು ನಾನು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ ಸಾಯಿತೇಜಾರವರ ಆಸ್ತಿ ಎಂದು ತೋರಿಸಿರುತ್ತೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಸರ್ವೆ ನಂಬರ 8 ಇರುತ್ತದೆ. ಈ ಜಮೀನಿನಲ್ಲಿ ಎಷ್ಟು ಪಾಲು ಆಗುತ್ತದೆ ಎಂದು ನಾನು ಕೇಳಿರುತ್ತೇನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆಯಾ ಎಂದರೆ ಸಾಕ್ಷಿ ನಮ್ಮ ವಕೀಲರು ನನಗೆ ಓದಿ ಹೇಳಿರುತ್ತಾರೆ ಎಂದು ಹೇಳುತ್ತಾರೆ. ಶ್ರೀನಿವಾಸ ನನ್ನ ಗಂಡ ಎಂದು ತೋರಿಸಲು ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಶ್ರೀನಿವಾಸರವರ ಹೆಂಡತಿ ಅಲ್ಲ ಎಂದರೆ ಸರಿಯಲ್ಲ. ಶ್ರೀನಿವಾಸರವರು ಬದುಕಿದ್ದಾರೊ ಇಲ್ಲವೊ ಎಂದು ತೋರಿಸಲು ದಾಖಲೆಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ನನಗೆ ಏನು ಗೊತ್ತಿಲ್ಲ ಎಂದು ಹೇಳುತ್ತಾರೆ. ಶ್ರೀನಿವಾಸರವರು ನನಗೆ ಹೊಡಿ ಬಡಿ ಮಾಡಿ ನೋಡಿಕೊಳ್ಳುತ್ತಿರಲಿಲ್ಲ ಎಂದು ನಾನು ಅವರ ವಿರುದ್ಧ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದೆ. ದಾವಾ ಆಸ್ತಿಯನ್ನು ಖರೀದಿ ಮಾಡಿದವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ನನಗೆ ಏನು ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ನನಗೆ ಯಾವು ಹಕ್ಕು ಇಲ್ಲದಿದ್ದರು ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಹಿರಿಯರ ಆಸ್ತಿ ಎಂದು ತೋರಿಸಲು ದಾಖಲೆಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ನನಗೆ ಏನು ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಶ್ರೀನಿವಾಸರವರ ಕುಟುಂಬದವರು ಎಂದು ತೋರಿಸಲು ದಾಖಲೆಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ನನಗೆ ಏನು ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು 5 ನೇ ಪ್ರತಿವಾದಿ ಖರೀದಿ ಮಾಡಿದಾಗಿನಿಂದ ಅವರೆ ಮಾಲಿಕ ಮತ್ತು ಸ್ವಾಧೀನದಾರರು ಇರುತ್ತಾರೆ ಎಂದರೆ ಸಾಕ್ಷಿ ನನಗೆ ಏನು ಗೊತ್ತಿಲ್ಲ ಎಂದು ಹೇಳುತ್ತಾರೆ. ಇದಕಿಂತ ಮೊದಲು ದಾವಾ ಆಸ್ತಿಯ ಬಗ್ಗೆ ಬೇರೆ ಯಾರಾದರು ದಾವೆ ಸಲ್ಲಿಸಿದ್ದಾರಾ ಎಂದರೆ ನನಗೆ ಗೊತ್ತಿಲ್ಲ. ಸತ್ಯಮ್ಮರವರಿಗೆ ಮಕ್ಕಳು ಇದ್ದಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಹಾಶಪ್ಪರವರಿಗೆ ಮನೆ ಇದೆಯಾ ಎಂದರೆ ಸಾಕ್ಷಿ ಅವರಿಗೆ ಯಾವುದೇ ಆಸ್ತಿ ಇಲ್ಲ ಎಂದು ಹೇಳುತ್ತಾರೆ. ಶ್ರೀನಿವಾಸರವರಿಗೆ ಮನೆ ಅಥವಾ ಜಮೀನು ಇದೆಯಾ ಎಂದರೆ ಸಾಕ್ಷಿ ಅವರಿಗೆ ಯಾವುದೇ ಆಸ್ತಿ

ಇಲ್ಲ ಎಂದು ಹೇಳುತ್ತಾರೆ. ಶ್ರೀನಿವಾಸರವರು ಬದುಕಿದ್ದಾಗಲೆ ದಾವಾ ಆಸ್ತಿಯನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸಾಕ್ಷಿ ನನಗೆ ಏನು ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಇರುವುದಿಲ್ಲ ಆದ್ದರಿಂದ ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಹಾಶಪ್ಪರವರ ಆಸ್ತಿ ಎಂದರೆ ಸಾಕ್ಷಿ ಅದು ನನ್ನ ಮಾವನ ಆಸ್ತಿ ಎಂದು ಹೇಳುತ್ತಾರೆ. ಸದರಿ ದಾವಾ ಆಸ್ತಿ ಹಾಶಪ್ಪರವರ ಸ್ವಂತ ಆಸ್ತಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಶ್ರೀನಿವಾಸರವರು ತೀರಿಕೊಂಡಿರುತ್ತಾರೆ ಎಂದು ಅವರ ಮರಣ ಪ್ರಮಾಣ ಪತ್ರವನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಮೀರಿಯಾಣದಲ್ಲಿ ಇರುತ್ತೇನೆ. ನಾನು ಬೈರಂ ಪಳ್ಳಿಯಲ್ಲಿ ಇರುತ್ತೇನೆ ಎಂದು ಬರೆಸಿರುತ್ತೇನೆ ಎಂದರೆ ಸಾಕ್ಷಿ ನಾನು ಮೀರಿಯಾಣದಲ್ಲಿ ಇರುತ್ತೇನೆ ಎಂದು ಹೇಳುತ್ತಾರೆ. ಸಾಕ್ಷಿ ನನ್ನ ತವರು ಮನೆಯಲ್ಲಿ ಇದ್ದೇನೆ ಎಂದು ಹೇಳುತ್ತಾರೆ. ಹಾಶಪ್ಪ ನನ್ನ ಮಾವ ಇರುತ್ತಾರೆ, ಶಾಮಪ್ಪ ನನ್ನ ಗಂಡನ ತಮ್ಮ ಇರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ10-08-2022 ರಲ್ಲಿ ನಾನು ಪ್ರತಿವಾದಿಯರಿಗೆ ದಾವಾ ಆಸ್ತಿಯಲ್ಲಿ ಪಾಲು ಕೊಡು ಅಂತಾ ಕೇಳಿದ್ದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಆದ್ದರಿಂದ ನನಗೆ ಪಾಲು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನಗೆ ಯಾವುದೇ ಹಕ್ಕು ಇಲ್ಲದಿದ್ದರು ಸಹ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.